319 (845) ಶ್ರೀ ಬಸವರಾಜು ಎ ಎಸ್ (ಅರಸೀಕೆರೆ) ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿರುವ ಕ್ರೀಡಾಂಗಣಗಳ ಸಂಖ್ಯೆ ಎಷ್ಟು (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು),

ಆ) ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿ ನೂತನ ಕ್ರೀಡಾಂಗಣ ನಿರ್ಮಾಣ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ,

ಇ) ಹಾಗಿದ್ದಲ್ಲಿ ಯಾವ ಸ್ಥಳದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ,

ಈ) ಅರಸೀಕೆರೆ ತಾಲ್ಲೂಕು ಜಾವಗಲ್ ಗ್ರಾಮದಲ್ಲಿ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆಯೇ ಯಾವಾಗ ಪ್ರಾರಂಬಿಸಲಾಯಿತು,

ಉ) ಇದರ ಕಾಮಗಾರಿ ಯಾವ ಹಂತದಲ್ಲಿದೆ ಪ್ರಗತಿಯಲ್ಲಿದೆಯೇ, ಯಾವಾಗ ಪೂರ್ಣಗೊಳಿಸಲಾಗುತ್ತದೆ

ಊ) ಈ ಕಾಮಗಾರಿಗೆ ಆದ ವೆಚ್ಚವೆಷ್ಟು ಬಾಕಿ ಇರುವ ಹಣವೆಷ್ಟು (ವಿವರ ಒದಗಿಸುವುದು)?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು)

ಅ) ಹಾಸನ ಜಿಲ್ಲೆಯಲ್ಲಿ ಈ ಕೆಳಗಿನಂತೆ ಕ್ರೀಡಾಂಗಣಗಳು ಇರುತ್ತವೆ

1) ಜಿಲ್ಲಾ ಕ್ರೀಡಾಂಗಣ, ಹಾಸನ

2) ಸಕಲೇಶಪುರ ತಾಲ್ಲೂಕು ಕ್ರೀಡಾಂಗಣ

3) ಹೊಳೇನರಸೀಪುರ ತಾಲ್ಲೂಕು ಕ್ರೀಡಾಂಗಣ

4) ಚನ್ನರಾಯಪಟ್ಟಣ ತಾಲ್ಲೂಕು ಕ್ರೀಡಾಂಗಣ

5) ಅರಸೀಕೆರೆ ತಾಲ್ಲೂಕು ಕ್ರೀಡಾಂಗಣ

6) ಬೇಲೂರು ತಾಲ್ಲೂಕು ಕ್ರೀಡಾಂಗಣ

7) ಜಾವಗಲ್ ಹೋಬಳಿ ಕ್ರೀಡಾಂಗಣ, ಅರಸೀಕೆರೆ ತಾಲ್ಲೂಕು

ಆ) ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿ ಕ್ರೀಡಾಂಗಣ ಕಾಮಗಾರಿಯು ಮುಕ್ತಾಯಗೊಂಡಿದ್ದು, ಯಾವುದೇ ಹೊಸ ಕ್ರೀಡಾಂಗಣ ನಿರ್ಮಾಣ ಮಾಡುವ ಉದ್ದೇಶವಿರುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಅರಸೀಕೆರೆ ತಾಲ್ಲೂಕಿನ ಜಾವಗಲ್‌ನಲ್ಲಿ ಸರ್ವೆ ನಂ 89,90 ಮತ್ತು 91ರ 4 20 ಎಕರೆ ನಿವೇಶನದಲ್ಲಿ ಕ್ರೀಡಾಂಗಣವನ್ನು ನಿರ್ಮಿಸಲಾಗುತ್ತಿದೆ ಈ ಕ್ರೀಡಾಂಗಣದ ಕಾಮಗಾರಿಯನ್ನು 2000ನೇ ಇಸವಿಯಲ್ಲಿ ಪ್ರಾರಂಭಿಸಲಾಗಿದೆ

ಉ) ಈ ಕ್ರೀಡಾಂಗಣದ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು, ಇದನ್ನು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು

ಊ) ಜಾವಗಲ್ ಕ್ರೀಡಾಂಗಣ ನಿರ್ಮಾಣಕ್ಕೆ ಅಂದಾಜಿಸಿದ ವೆಚ್ಚ 14 50 ಲಕ್ಷಗಳ ಪೈಕಿ ಈಗಾಗಲೇ ರೂ 12 50 ಲಕ್ಷ ಹಣವನ್ನು ವೆಚ್ಚ ಮಾಡಲಾಗಿದ್ದು, ಇನ್ನುಳಿಕೆ ರೂ 2 00 ಲಕ್ಷ ನಿರ್ಮಾಣ ಏಜೆನ್ಸಿಯವರಲ್ಲಿ ಉಳಿದಿದ್ದು, ಈ ಹಣವನ್ನು ವೆಚ್ಚ ಮಾಡಿ ಅಗತ್ಯ ಕಾಮಗಾರಿಯನ್ನು ಪೂರೈಸಲು ಉದ್ದೇಶಿಸಿದೆ ಇನ್ನೇನಾದರೂ ವೆಚ್ಚವನ್ನು ಭರಿಸಲು ಹಣ ಬೇಕಾದಲ್ಲಿ ಜಿಲ್ಲಾ ಪಂಚಾಯತ್ ಅನುದಾನವನ್ನು ಪಡೆದು ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲಾಗುವುದು

320 (8) ಶ್ರೀ ಬಸವರಾಜು ಹೆಚ್ ಡಿ (ವಿರಾಜಪೇಟೆ) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವವಿಖ್ಯಾತ ನಾಗರಹೊಳೆ ಅರಣ್ಯಕ್ಕೆ ಸಂಪರ್ಕ ಕಲ್ಪಿಸುವ ಬಾಳಲೆ–ಮೂರ್ಕಲು ರಸ್ತೆ ಹಾಗೂ ಕುಟ್ಟಮೂರ್ಕಲ್ ರಸ್ತೆಗಳು ಹಾಳಾಗಿದ್ದರೂ ಈ ರಸ್ತೆ ದುರಸ್ಥಿಗೆ ಪ್ರವಾಸೋದ್ಯಮ ಇಲಾಖೆಯಿಂದ ಯಾವುದೇ ಹಣವನ್ನು ಬಿಡುಗಡೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಈ ರಸ್ತೆಗಳ ದುರಸ್ಥಿಗೆ ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ,

ಇ) ಪ್ರಸಕ್ತ ಸಾಲಿನಲ್ಲಿ ಸರ್ಕಾರ ಮಂಜೂರು ಮಾಡಿರುವ ಹಣವೆಷ್ಟು (ವಿವರ ನೀಡುವುದು)?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು):

ಅ) ಹೌದು

ಆ) ಕೆಳಕಂಡ ಎರಡು ರಸ್ತೆಗಳು ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ವಲಯ ವ್ಯಾಪ್ತಿಯಲ್ಲಿದ್ದು, ಈ ವಲಯದ ವ್ಯಾಪ್ತಿಯಿಂದ ದುರಸ್ಥಿಗಾಗಿ ಕೈಗೊಂಡ ಕ್ರಮ ಇಂತಿದೆ